1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು

<u>ಸಿ.ಸಿ.ಸಂಖ್ಯೆ:1214/2024</u>

ಪಿರ್ಯಾದಿ : ಕವಲಂದೆ ಪೋಲಿಸರು

ವಿರುದ್ಧ

ಆರೋಪಿತರು :

1. ಮಹದೇವೇಗೌಡ **ಬಿನ್ ಲೇಟ್** ಬಸವೇಗೌಡ 50 ವರ್ಷ
2. ಬಸವರಾಜು **ಬಿನ್** ಗುರುಸಿದ್ದೇಗೌಡ 30 ವರ್ಷ
3. ಕೆಂಪಮ್ಮ ಕೋಂ ಮಹದೇವೇಗೌಡ 40 ವರ್ಷ
4. ಶಿವಮ್ಮ ಕೋಂ ಪುಟ್ಟಸ್ವಾಮಿಗೌಡ 55 ವರ್ಷ
5. ನಾಗಮ್ಮ ಕೋಂ ಗುರುಸಿದ್ದೇಗೌಡ 65 ವರ್ಷ
6. ಚಂದ್ರಮ್ಮ ಕೋಂ ಬಸವರಾಜು 30 ವರ್ಷ

ಆರೋಪಿತರ ವಾಸ: ಹಂಪಾಪುರ ಗ್ರಾಮ, ನಂಜನಗೂಡು ತಾಃ

<u>ದೋಷಾರೋಪಣೆ</u>

ಶ್ರೀಮತಿ.ಸರಿತಾ ಕುಮಾರಿ.ಎ.ಎಂ, ಬಿ.ಎ.,ಎಲ್.ಎಲ್.ಬಿ., *1*ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ**:-**

ದಿನಾಂಕ:-28.02.2024 ರಂದು ಸಂಜೆ 07-00 ಗಂಟೆ ಸಮಯದಲ್ಲಿ ನಂಜನಗೂಡು ತಾಲೂಕು ಕವಲಂದೆ ಪೊಲೀಸ್ ಠಾಣಾ ಸರಹದ್ದು ಹಂಪಾಪುರ ಗ್ರಾಮದ ಶ್ರೀ ಬೇಗೂರು ಮಾರಮ್ಮನ ದೇವಸ್ಥಾನದ ಮುಂಭಾಗ ಡೈರಿಗೆ ಹಾಲನ್ನು ಹಾಕುವ ಸ್ಥಳ ಪರಿಶೀಲನೆಗಾಗಿ ಸಂಬಂದ ಪಟ್ಟ ಸಿಇಓ ಹಾಗೂ ಸೂಪರ್ ವೈಸರ್ ರವರು ನಿಂತು ಸ್ಥಳ ಪರಿಶೀಲನೆ ಮಾಡುತ್ತಿರುವಾಗ, ಅಲ್ಲಿಗೆ ಬಂದ ಚಾಸಾ.1 ರವರು ಡೈರಿ ವಿಚಾರದಲ್ಲಿ ಸ್ಥಳದಲ್ಲಿ ಗ್ರಾಮದ ಜನರ ಜೊತೆ ಮಾತನಾಡುತ್ತಿರುವಾಗ, 1ನೇ ಆರೋಪಿತರಾದ ನೀವು ಚಾಸಾ.1 ರವರಿಗೆ ಏಕಾಏಕಿ ನೀನು ಯಾಕೆ ಇಲ್ಲಿಗೆ ಬಂದಿದಿಯಾ ಲೋಪರ್ ಮುಂಡೆ ಸೂಳೆ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದು

ಅವರಿಗೆ ಅವಮಾನ ಮಾಡುವ ಉದ್ದೇಶದಿಂದ ಮಹಿಳೆಯ ಘನತೆಗೆ ಕುಂದುಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ.509 ಸಹವಾಚಕ ಕಲಂ.149 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಎರಡನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, 1ನೇ ಆರೋಪಿತರಾದ ನೀವು ಅಪರಾಧವನ್ನು ಎಸಗುವ ಏಕೋದ್ದೇಶದಿಂದ, ಚಾಸಾ. 1 ರವರ ಸೀರೆಯನ್ನು ಹಿಡಿದು ಎಳೆದಾಡಿ ಅವಮಾನ ಮಾಡಿ ಅವರ ಮೇಲೆ ಅಪರಾಧಿಕ ಬಲಪ್ರಯೋಗ ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.354 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಮೂರನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, 1ನೇ ಆರೋಪಿತರಾದ ನೀವು ಅಪರಾಧವನ್ನು ಎಸಗುವ ಏಕೋದ್ದೇಶದಿಂದ, ಚಾಸಾ. 2 ರಿಂದ 4 ರವರು ಜಗಳ ಬಿಡಿಸಲು ಬಂದಾಗ ಅವರಿಗೂ ಕತ್ತೆ ಮುಂಡೆರ ನೀವು ಯಾಕೆ ಜಗಳ ಬಿಡಿಸಲು ಬಂದಿದಿರಾ ಎಂದು ಸದರಿಯವರುಗಳಿಗೂ ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ, ಜಗಳ ಬಿಡಿಸಲು ಬಂದ ಚಾಸಾ. 5 ರವರಿಗೆ ಬೋಳಿಮಗನೆ, ಸೂಳೆಮಗನೆ ಎಂದು ಬೈದಿರುತ್ತೀರಿ ಮತ್ತು 1 ಮತ್ತು 2 ನೇ ಆರೋಪಿತರಾದ ನೀವು ಚಾಸಾ.7 ರಿಂದ 10 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಉದ್ರೇಕವನ್ನುಂಟು ಮಾಡಿದರೆ ಅಂತಹ ಉದ್ರೇಕದಿಂದ ಶಾಂತಿ ಭಂಗ ಮಾಡಲಿ ಅಥವಾ ಇತರೆ ಯಾವುದೇ ಅಪರಾಧ ಮಾಡಲಿ ಎನ್ನುವ ಉದ್ದೇಶದಿಂದ ಅವರನ್ನು ಅವಮಾನಿಸಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ

ದಂಡ ಸಂಹಿತೆಯ ಕಲಂ.504 ಸಹವಾಚಕ ಕಲಂ.149 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ನಾಲ್ಕನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡ ಕಾರಣ, ಭಾರತ ದಂಡ ಸಂಹಿತೆಯ ಕಲಂ 143 ಸಹವಾಚಕ 149 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಐದನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಕೂಗಾಡಿಕೊಂಡು ದಾಂದಲೆ ಮಾಡಿದ ಕಾರಣ, ಭಾರತ ದಂಡ ಸಂಹಿತೆಯ ಕಲಂ 147 ಸಹವಾಚಕ 149 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಆರನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು ಆ ಪೈಕಿ 2 ಮತ್ತು 3 ನೇ ಆರೋಪಿತರಾದ ನೀವು ಚಾಸಾ.1 ರವರಿಗೆ ಕೈಗಳಿಂದ ಮೈ ಕೈಗಳಿಗೆ ಹೊಡೆದಿರುತ್ತೀರಿ ಮತ್ತು 1 ಮತ್ತು 2 ನೇ ಆರೋಪಿತರಾದ ನೀವು ಚಾಸಾ.7 ರಿಂದ 10 ರವರಿಗೆ ಕೈಗಳಿಂದ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ.323 ಸಹವಾಚಕ 149 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಏಳನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು, ಆರೋಪಿತರಾದ ನೀವು ಚಾಸಾ.5 ರವರಿಗೆ ಇಟ್ಟಿಗೆ ಚೂರಿನಿಂದ ಮೈಕೈಗೆ ಹೊಡೆದಿರುತ್ತೀರಿ ಮತ್ತು 1 ಮತ್ತು 2 ನೇ ಆರೋಪಿತರಾದ ನೀವು ಚಾಸಾ.7 ರಿಂದ 10 ರವರಿಗೆ ಕಲ್ಲಿನಿಂದ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ.324 ಸಹವಾಚಕ 149 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಕೊನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು, 4 ರಿಂದ 6 ನೇ ಆರೋಪಿತರಾದ ನೀವು ಚಾಸಾ.6 ರವರಿಗೆ ಚಪ್ಪಲಿಯಿಂದ ಹೊಡೆಯುತ್ತೇನೆ ಎಂದು ಚಪ್ಪಲಿ ಯನ್ನು ತೋರಿಸಿ ಅವರಿಗೆ ಅವಮಾನವನ್ನುಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ.355 ಸಹವಾಚಕ 149 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

(ಮೇಲ್ಕಂಡ ಆರೋಪವನ್ನು ಆರೋಪಿಗೆ ಓದಿ ಹೇಳಿ ಕೇಳಲಾಯಿತು. ಆರೋಪಿ ಕೊಟ್ಟ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನು ಒಳಗೊಂಡಿದೆ ಎಂದು ದಿನಾಂಕ 13.01.2026 ರಂದು ತೆಗೆದ ನ್ಯಾಯಾಲಯದಲ್ಲಿ ದೃಢೀಕರಿಸಿರುತ್ತೇನೆ.)

1 ನೇ ಹೆ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ನಂಜನಗೂಡು

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು

ಸಿ.ಸಿ.ಸಂಖ್ಯೆ:1214/2024

ಪಿರ್ಯಾದಿ : ಕವಲಂದೆ ಪೋಲಿಸರು

ವಿರುದ್ಧ

ಆರೋಪಿತರು :

1. ಮಹದೇವೇಗೌಡ ಬಿನ್ ಲೇಟ್ ಬಸವೇಗೌಡ 50 ವರ್ಷ
2. ಬಸವರಾಜು ಬಿನ್ ಗುರುಸಿದ್ದೇಗೌಡ 30 ವರ್ಷ
3. ಕೆಂಪಮ್ಮ ಕೋಂ ಮಹದೇವೇಗೌಡ 40 ವರ್ಷ
4. ಶಿವಮ್ಮ ಕೋಂ ಪುಟ್ಟಸ್ವಾಮಿಗೌಡ 55 ವರ್ಷ
5. ನಾಗಮ್ಮ ಕೋಂ ಗುರುಸಿದ್ದೇಗೌಡ 65 ವರ್ಷ
6. ಚಂದ್ರಮ್ಮ ಕೋಂ ಬಸವರಾಜು 30 ವರ್ಷ

ಆರೋಪಿತರ ವಾಸ: ಹಂಪಾಪುರ ಗ್ರಾಮ, ನಂಜನಗೂಡು ತಾಃ

: ಆಪಾದನೆ :

ಪ್ರಶ್ನೆ:1- ಈ ಮೇಲೆ ಹೇಳಿದಂತೆ ನಿಮಗೆ ಓದಿ ಹೇಳಿ ವಿವರಿಸಿದ ಆಪಾದನೆಯನ್ನು ಅರ್ಥಮಾಡಿಕೊಂಡಿರುವಿರಾ?

1 ನೇ ಆರೋಪಿ ಉತ್ತರಃ

2 ನೇ ಆರೋಪಿ ಉತ್ತರಃ

3 ನೇ ಆರೋಪಿ ಉತ್ತರಃ

4 ನೇ ಆರೋಪಿ ಉತ್ತರಃ

5 ನೇ ಆರೋಪಿ ಉತ್ತರಃ

6 ನೇ ಆರೋಪಿ ಉತ್ತರಃ

ಪ್ರಶ್ನೆ:2- ಸದರಿ ಆಪಾದನೆಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೋ?

1 ನೇ ಆರೋಪಿ ಉತ್ತರಃ

2 ನೇ ಆರೋಪಿ ಉತ್ತರಃ

3 ನೇ ಆರೋಪಿ ಉತ್ತರಃ

4 ನೇ ಆರೋಪಿ ಉತ್ತರಃ

5 ನೇ ಆರೋಪಿ ಉತ್ತರಃ

6 ನೇ ಆರೋಪಿ ಉತ್ತರಃ

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆರೋಪಿತನ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸಲಾಗಿದೆ.

1 ನೇ ಹೆ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
**ನಂಜನಗೂಡು**